# <u>ಹೊಳೆನರಸೀಪುರದ ಅಪರ ಜೆ.ಎಂ.ಎಫ್.ಸಿ. ರವರ ನ್ಯಾಯಾಲಯದಲ್ಲಿ.</u>

## <u>ಸಿ.ಸಿ. ನಂಃ 1685/2021</u>

| | | | |
|---|---|---|---|
| ಸಾಕ್ಷಿಯ ಹೆಸರು | ಃ ಹೊನ್ನೇಗೌಡ ಪಿ. | ಸಿ.ಡಬ್ಲ್ಯೂ | ಃ 2 |
| ತಂದೆ ಹೆಸರು | ಃ ಲೇಟ್ ಪುಟ್ಟೇಗೌಡ | ಪಿ.ಡಬ್ಲ್ಯೂ | ಃ 2 |
| ವಯಸ್ಸು | ಃ 47 ವರ್ಷ | ಪ್ರಮಾಣೀಕರಿಸಿದ ದಿಃ 12/01/2023 | |
| ವೃತ್ತಿ | ಃ ಎ.ಹೆಚ್.ಸಿ. | | |
| ವಾಸ | ಃ ಹಾಸನ | | |

ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

<u>ಮುಖ್ಯ ವಿಚಾರಣೆಃ- ಮಾನ್ಯ ಎ.ಪಿ.ಪಿ.ಯವರಿಂದಃ</u>

ನಾನು 2019 ರಿಂದ 2022 ರವರೆಗೆ ಹೊಳೆನರಸೀಪುರದ ಗ್ರಾಮಾಂತರ ಠಾಣೆಯಲ್ಲಿ ಚಾಲಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕಃ 23.07.2021 ರಲ್ಲಿ ರಾತ್ರಿ 08.00 ಗಂಟೆ ಸಮಯದ ಒಳಗೆ ಕಂಟ್ರೋಲ್ ರೂಂನಿಂದ ನಮಗೆ ಮಾಹಿತಿ ಬಂದಿರುತ್ತದೆ. ಕೆಎ-03-ಜಿ-1496 ರಲ್ಲಿ ನಾನು ಮತ್ತು ಚಾಸಾ-1 ಎಸ್.ಅಂಕನಹಳ್ಳಿ ಗ್ರಾಮಕ್ಕೆ ಹೋದೆವು. ಚಾಸಾ-1 ರವರ ಮೇಲೆ ಆರೋಪಿಗಳು ಗಲಾಟೆ ಮಾಡಿರುತ್ತಾರೆ. ಆರೋಪಿಗಳು ಚಾಸಾ-1 ರವರನ್ನು ಕುರಿತು ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ. ಆರೋಪಿಗಳು ಚಾಸಾ-1 ರವರನ್ನು ಬಟ್ಟೆ ಹಿಡಿದು ಎಳೆದಾಡಿ, ಬಟ್ಟೆಯನ್ನು ಹರಿದು ಹಾಕಿ ನೂಕಿದರು. ಚಾಸಾ-1 ರವರನ್ನು ಕಾಲಿನಿಂದ ಒದ್ದು ಈಚೆಗೆ ಎಳೆತಂದರು. ಆನಂತರ ಗ್ರಾಮಸ್ಥರು ಬಂದು ತಡೆದರು. ಪೋಲೀಸರಿಗೆ ಈ ಸಂಬಂಧಪಟ್ಟಂತೆ ಹೇಳಿಕೆಯನ್ನು ನೀಡಿರುವುದಿಲ್ಲ. ಆರೋಪಿಯನ್ನು ನಾನು ನೋಡಿರುತ್ತೇನೆ. ಈ ದಿನ ಆರೋಪಿಗಳು ಗೈರು ಹಾಜರಿದ್ದು, ಆರೋಪಿ ಪರ ವಕೀಲರು ವಿನಾಯಿತಿ ಅರ್ಜಿಯನ್ನು ಸಲ್ಲಿಸಿರುತ್ತಾರೆ.

<u>(ಮಾನ್ಯ ಎ.ಪಿ.ಪಿ.ಯವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೋರಿರುತ್ತಾರೆ. ಅನುಮತಿ ನೀಡಲಾಯಿತು.)</u>

<u>ಪಾಟೀ ಸವಾಲುಃ - ಮಾನ್ಯ ಎ.ಪಿ.ಪಿ. ರವರಿಂದಃ</u>

ನನಗೆ ಹಾಸನ ಕಂಟ್ರೋಲ್ ರೂಂ. ಇವೆಂಟ್ ನಂಬರ್ 149740 ರಿಂದ ಕರೆ ಬಂದಿತ್ತು ಎಂದರೆ ಸರಿ. ಇದಕ್ಕೆ ಸಂಬಂಧಿಸಿದಂತೆ ಎಸ್.ಅಂಕನಹಳ್ಳಿ ಗ್ರಾಮದ ರವಿಕುಮಾರ್ ರವರು ಕರೆ ಮಾಡಿ ತಿಳಿಸಿದರು ಎಂದರೆ ಸರಿ. ಆರೋಪಿಗಳು ನಮ್ಮ ಊರಿಗೆ ಮತ್ತೆ ಬಂದರೆ ನಿಮ್ಮನ್ನು ಕೊಲೆ ಮಾಡಿ ಹೂತುಹಾಕುತ್ತೇವೆ ಎಂದು ಹೇಳಿರುತ್ತಾರೆ ಎಂದರೆ ಸರಿ. ಚಾಸಾ-1 ರವರಿಗೆ ಕೊರಳಪಟ್ಟಿ ಎಳೆದಾಡಿ ತನ್ನ ಸರ್ಕಾರಿ ಕರ್ತವ್ಯಕ್ಕೆ ಅಡ್ಡಿಪಡಿಸಿದರು ಎಂದರೆ ಸರಿ. ಇದಕ್ಕೆ ಸಂಬಂಧಿಸಿದಂತೆ ದಿನಾಂಕಃ 24.07.2021 ರಂದು ತನಿಖಾಧಿಕಾರಿಗಳ ಮುಂದೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿ.

ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಹೆಚ್.ಆರ್.ಜೆ. ವಕೀಲರಿಂದಃ

ನಾನು ಡಿ.ಎ.ಆರ್. ಪೋಲೀಸ್ ಎಂದರೆ ಸರಿ. ನನ್ನನ್ನು ಗ್ರಾಮಾಂತರ ಪೋಲೀಸರ್ ಠಾಣೆ, ಹೊಳೆನರಸೀಪುರದಲ್ಲಿ ಚಾಲಕನಾಗಿ ಕರ್ತವ್ಯದಲ್ಲಿ ಇರುವ ಬಗ್ಗೆ ದಾಖಲಾತಿಯನ್ನು ಪೋಲೀಸ್ ಠಾಣೆಗೆ ನೀಡಿರುತ್ತೇನೆ ಆದರೆ ನ್ಯಾಯಾಲಯದಲ್ಲಿ ಹಾಜರುಪಡಿಸಿರುವುದಿಲ್ಲ. ನನ್ನನ್ನು 112 ಗೆ ತುರ್ತು ಸಂದರ್ಭಕ್ಕೆ ಚಾಲಕನಾಗಿ ನೇಮಿಸಿಕೊಂಡಿದ್ದರು. ನನ್ನನ್ನು 112 ಚಾಲಕನಾಗಿ ನೇಮಕಮಾಡಿಕೊಂಡ ಸಂಬಂಧ ದಾಖಲಾತಿಯನ್ನು ನ್ಯಾಯಾಲಯಕ್ಕೆ ಕೊಟ್ಟಿರುವುದಿಲ್ಲ. ಗಲಾಟೆ ನಡೆದ ದಿನ 23.07.2021 ಆಗಿರುತ್ತದೆ. ಘಟನೆಯ ದಿನ ನನ್ನನ್ನು ಇನೋವಾ ಕಾರಿಗೆ ಚಾಲಕನಾಗಿ ನೇಮಕ ಮಾಡಿಕೊಂಡಿರಲಿಲ್ಲ ಎಂದರೆ ಸರಿಯಲ್ಲ. ಘಟನೆಯ ದಿನ ಚಾಸಾ-1 ಮತ್ತು ನಾನು ಇದ್ದೇನು. 07.20 ರಿಂದ 08.00 ಗಂಟೆಯ ಒಳಗೆ ನಾನು ಕೃತ್ಯ ನಡೆದ ಸ್ಥಳಕ್ಕೆ ತಲುಪಿರುತ್ತೇನೆ. ದಿನಾಂಕಃ 23.07.2021 ರಂದು ಎಸ್.ಅಂಕನಹಳ್ಳಿಯಲ್ಲಿ ಪಿತೃಪಕ್ಷ ಹಬ್ಬ ಇತ್ತು ಎಂದರೆ ಸರಿಯಲ್ಲ. ಘಟನೆಯ ದಿನ ನಾವು ಚಾಸಾ-6 ರವರ ಮನೆಯ ಹಬ್ಬದ ಊಟಕ್ಕೆ ಹೋಗಿದ್ದೇವು ಎಂದರೆ ಸರಿಯಲ್ಲ. ಘಟನೆಯ ದಿನ ನಾನು ಮಾಹಿತಿ ಬಂದಾಗಾ ಹೊಳೆನರಸೀಪುರ ನಗರ ಠಾಣೆಯ ಮುಂಭಾಗ ಇದ್ದೆ. ನಮಗೆ ಕಂಟ್ರೋಲ್ ರೂಂ ನಿಂದ 07.20 ಕ್ಕೆ ಮಾಹಿತಿ ಬಂದಿರುತ್ತದೆ. ಹೊಳೆನರಸೀಪುರದಿಂದ ಸಂಕನಹಳ್ಳಿ ಗ್ರಾಮಕ್ಕೆ 7 ಕಿ.ಮೀ. ಅಂತರವಿದೆ. ಹೊಳೆನರಸೀಪುರದಿಂದ ಅಂಕನಹಳ್ಳಿ ತಲುಪಲು 05 ನಿಮಿಷ ಸಾಕು.

ಘಟನೆಯ ದಿನ ನಾನು ಮತ್ತು ನಮ್ಮ ಸಿಬ್ಬಂದಿಯವರು ಚಾಸಾ-6 ರವರ ಮನೆಯ ಹಬ್ಬಕ್ಕೆ ಹೋಗುವ ಸಲುವಾಗಿ ಮದ್ಯಪಾನ ಸೇವಿಸಿಕೊಂಡು ಊಟಕ್ಕೆ ಹೋಗಿರುತ್ತೇವೆ ಎಂದರೆ ಸರಿಯಲ್ಲ. ನಮಗೆ ಎಸ್.ಪಿ. ಕಚೇರಿಯಿಂದ ಯಾವುದೇ ಮಾಹಿತಿ ಬರದೇ ಇದ್ದರೂ ಹಾಗೂ ವಾಹನವನ್ನು ಠಾಣೆಯ ಮುಂಭಾಗವೇ ನಿಲ್ಲಿಸಿಕೊಂಡು ಈ ಪ್ರಕರಣಕೊಸ್ಕರ ಸುಳ್ಳು ಸಂಗತಿಯನ್ನು ಸೃಷ್ಟಿಸಿಕೊಂಡು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆ ದಿನ ಆರೋಪಿಗಳು ನಮಗೆ ಯಾವುದೇ ರೀತಿಯ ಹಲ್ಲೆ ಮಾಡಿರುವುದಿಲ್ಲ ಹಾಗೂ ನಮ್ಮ ಸಮವಸ್ತ್ರವನ್ನು ಹಿಡಿದು ಎಳೆದಾಡಿಲ್ಲ ಎಂದರೆ ಸರಿಯಲ್ಲ. ಆರೋಪಿತರು ಆ ದಿನ 07.20 ರಿಂದ 08.00 ಗಂಟೆಯವರೆಗೆ ಗಲಾಟೆ ಮಾಡಿರುತ್ತಾರೆ. ಘಟನೆಯ ದಿನ ಹಬ್ಬ ಇದ್ದುದ್ದರಿಂದ ಸಾಕಷ್ಟು ಜನ ಹಾಜರಿದ್ದರು ಎಂದರೆ ಸರಿಯಲ್ಲ. ನಾವು ಆ ದಿನ 07.20 ರಿಂದ 08.00 ಗಂಟೆಯವರೆಗೆ ಘಟನ ಸ್ಥಳಕ್ಕೆ ಹೋಗಿರಲಿಲ್ಲ ಎಂದರೆ ಸರಿಯಲ್ಲ.

ಘಟನೆಯ ದಿನ ನಮ್ಮ ಮೇಲೆ ಆರೋಪಿತರು ಹಲ್ಲೆ ಮಾಡಿರುವುದಿಲ್ಲ ಹಾಗೂ ಯಾವುದೇ ಕೃತ್ಯ ಎಸಗಿರುವುದಿಲ್ಲ ಎಂದರೆ ಸರಿಯಲ್ಲ. ಚಾಸಾ-1 ರವರು ಮತ್ತು ನಾನು ಸೇರಿಕೊಂಡು ಈ ಪ್ರಕರಣವನ್ನು ಸೃಷ್ಟಿಸಿಕೊಂಡು ಆರೋಪಿತರ ಮೇಲೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಮೇಲಾಧಿಕಾರಿಗಳ ಮಾತು ಕೇಳಿಕೊಂಡು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಯಾವುದೇ ಘಟನೆಯ ಬಗ್ಗೆ ಸಂದೇಶ ಬಂದಿರಲಿಲ್ಲ ಎಂದರೆ ಸರಿಯಲ್ಲ. ಘಟನೆಯ ಬಗ್ಗೆ ಏನು ಗೊತ್ತಿಲ್ಲದೇ ಇದ್ದರೂ ಮೇಲಾಧಿಕಾರಿಗಳ ಮಾತು ಕೇಳಿಕೊಂಡು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಮು.ಮಾ.1 ರಿಂದ 3 ಅನ್ನು ಈ ಪ್ರಕರಣಕೊಸ್ಕರ ಚಾಸಾ-1 ರವರು ಸೃಷ್ಟಿಸಿಕೊಂಡಿದ್ದೇವೆ ಎಂದರೆ ಸರಿಯಲ್ಲ. ಚಾಸಾ-1 ರವರು ಮು.ಮಾ.1 ರ ಸಮವಸ್ತ್ರವನ್ನು ಧರಿಸರಲಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲಃ

(ಬಹಿರಂಗ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

**ಓ.ಹೇ.ಕೇ.ಸ.ಇ.**

ಅಪರ ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ,
ಹೊಳೆನರಸೀಪುರ